**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 35/2022**

**ಪಿ.ಡಬ್ಲ್ಯುಃ 6 ಸಿಡಬ್ಲ್ಯುಃ12**

| | | |
|---|---|---|
| ಸಾಕ್ಷಿಯ ಹೆಸರು | : | ಯಂಕಮ್ಮ |
| ಗಂಡನ ಹೆಸರು | : | ಈರಣ್ಣ |
| ವಯಸ್ಸು | : | 45 ವರ್ಷ |
| ವೃತ್ತಿ | : | ಮೇಸ್ತ್ರಿ |
| ವಾಸಸ್ಥಳ | : | ಹರಿಶ್ಚಂದ್ರ ಘಾಟ್ ಹತ್ತಿರ, ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 03.07.2025.**

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-**

ಚಾಸಾ-11 ಇವರು ನನ್ನ ಗಂಡ. 1 ರಿಂದ 8 ನೇ ಆರೋಪಿತರ ಪರಿಚಯ ಇದೆ. ಅವರೆಲ್ಲರೂ ನಮ್ಮ ಮನೆಯ ಹತ್ತಿರ ಇರುತ್ತಾರೆ. 1 ನೇ ಆರೋಪಿತನ ಹೆಂಡತಿ ಶ್ರಾವಂತಿ ಇವಳ ಪರಿಚಯ ಇತ್ತು. ನನಗೆ ಚಾಸಾ-1 ಮತ್ತು 5 ಇವರ ಪರಿಚಯ ಇಲ್ಲ. 1 ನೇ ಆರೋಪಿತನ ಮದುವೆ ಶ್ರವಂತಿ ಇವಳ ಜೊತೆ 4-5 ವರ್ಷಗಳ ಹಿಂದೆ ಆಗಿತ್ತು. ಅವರಿಗೆ ಒಬ್ಬ ಮಗಳು ಇದ್ದಳು. 1 ನೇ ಆರೋಪಿ ಹಾಗೂ ಶ್ರಾವಂತಿ ಚೆನ್ನಾಗಿಯೇ ಇದ್ದರು. ಶ್ರಾವಂತಿ 2 ವರ್ಷಗಳ ಹಿಂದೆ ಮರಣ ಹೊಂದಿರುತ್ತಾಳೆ. ಅವಳ ಮನೆಯಲ್ಲಿ ಜಗಳ ಆಗಿತ್ತು. ಅದು ಬಿಟ್ಟರೆ ಅವಳಿಗೆ ಏನೂ ಆಗಿತ್ತು ಎಂದು ನನಗೆ ಗೊತ್ತಿಲ್ಲ ಹಾಗು ನಾನು ಏನನ್ನೂ ನೋಡಿಲ್ಲ. ಆರೋಪಿತರೆಲ್ಲರೂ ಶ್ರಾವಂತಿ ಇವಳಿಗೆ ತೊಂದರೆ ಕೊಡುತ್ತಿರುವ ಬಗ್ಗೆ ನಾನು ನೋಡಿದ್ದೇನೆ ಎಂದು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಶ್ರಾವಂತಿ ತನ್ನ ಜೀವಿತ ಕಾಲದಲ್ಲಿ ಆರೋಪಿತರು ಅವಳಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದ ಬಗ್ಗೆ ನನ್ನ ಮುಂದೆ ಏನೂ ಹೇಳಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅವರ ವಾದವನ್ನು ಕೇಳಿ, ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).

ಪಾಟೀಸವಾಲು ಸಾರ್ವಜನಿಕ ಅಭಿಯೋಜಕರಿಂದಃ-

**1** ರಿಂದ **8** ನೇ ಆರೋಪಿತರೆಲ್ಲರೂ ಕೂಡಿಕೊಂಡು ಶ್ರಾವಂತಿಗೆ **10** ಲಕ್ಷ ರೂ. ವರದಕ್ಷಿಣೆಗೆ ತೆಗೆದುಕೊಂಡು ಬಾ ಎಂದು ಹಿಂಸೆ ನೀಡುತ್ತಿದ್ದರು ಎಂದರೆ ನನಗೆ ಗೂತ್ತಿಲ್ಲ. ಗಲಾಟೆ ನಡೆಯುತ್ತಿದ್ದಾಗ ನಾನು ಹೋಗಿ ನೋಡಿ ಆರೋಪಿತರಿಗೆ ಬುದ್ದಿವಾದ ಹೇಳಿದ್ದೇ ಎಂದರೆ ಸರಿಯಲ್ಲ. ಶ್ರಾವಂತಿ ಕೂಡ ಆರೋಪಿತರು ತನಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಾರೆ, ಇನ್ನೂ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹಿಂಸಿಸುತ್ತಾರೆ ಎಂದು ನನ್ನ ಮುಂದೆ ಹೇಳಿದ್ದಳು ಎಂದರೆ ಸರಿಯಲ್ಲ.

ಈಗ ಓದಿ ಹೇಳಿದ ಈಗ್ಗೆ **15** ವರ್ಷಗಳಿಂದ ------- ದೂರು ಕೊಟ್ಟಿರುತ್ತಾನೆ ಎಂದು ತಿಳಿಯಿತು ಎಂದು ನಿಪಿ-**17** ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಪಂಚನಾಮೆ ಮಾಡಲು ನಾನೇ ಸ್ಥಳ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹಾಗೂ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಓದಿ ಹೇಳಿ ನಂತರ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ನಿಪಿ-**12** ಕ್ಕೆ ನಾನು ಪಂಚನಾಮೆ ಮಾಡುವ ಕಾಲಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಈಗ ನೋಡುತ್ತಿರುವ ಮು.ಮಾ **1** ಸೀರೆಯನ್ನು ಪಂಚನಾಮೆಯ ಕಾಲಕ್ಕೆ ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. **1** ರಿಂದ **8** ನೇ ಆರೋಪಿತರು ಶ್ರಾವಂತಿ ಇವಳ ಸಾವಿಗೆ ಕಾರಣ ಎಂದು ಗೊತ್ತಿದ್ದರೂ ಕೂಡ ಆರೋಪಿತರು ನನ್ನ ಮನೆಯ ಹತ್ತಿರ ಇರುತ್ತಾರೆ ಆದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು ಆರೋಪಿ ಪರ ಶ್ರೀ ಎಂ ಎ ಬಿ ವಕೀಲರಿಂದಃ</u>

ಶ್ರಾವಂತಿ ಇವಳ ಮನೆಯಲ್ಲಿ ಅವಳು ಹಾಗೂ ಅವಳ ಗಂಡ ಇಬ್ಬರೇ ಇರುತ್ತಿದ್ದರು ಎಂದರೆ ಸರಿ. 2 ನೇ ಆರೋಪಿ ತಾರಕೇಶ ಬೇರೆ ಮನೆಯಲ್ಲಿ ಇರುತ್ತಿದ್ದಾನೆ ಎಂದರೆ ಸರಿ. 7 ಹಾಗೂ 8 ನೇ ಆರೋಪಿತರು ಅವರ ಅಕ್ಕ ಲಕ್ಷ್ಮಿ ಇವಳ ಮನೆಗೆ ಬರುತ್ತಿದ್ದರು ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

C/c, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.